> ತಾನು ಮಾತನಾಡಿದ್ದು ಸತ್ಯವಾದದ್ದು ಮತ್ತು ನ್ಯಾಯಯುತವಾದದ್ದೆಂದು ಅವನ ಒಳಮನಸ್ಸು ಹೇಳುತ್ತಿತ್ತು. ಎರಡು ಚಿಲ್ಡ್ ಬಿಯರನ್ನು ರೂಮಿಗೇ ತರಿಸಿ ಒಂದೇ ಗುಟುಕಿಗೆ ಅರ್ಧ ಗ್ಲಾಸು ಕುಡಿದವನಿಗೆ ಬಾಯಾರಿಕೆ ಇಂಗಿ, ದೇಹವೆಲ್ಲ ಒಂದು ಸ್ಥಾಯಿಗೆ ಬಂದ ಅನುಭವವಾಗಿತ್ತು.

ಕಡೆಗೆ ಮಧ್ಯಾಹ್ನ ಎರಡು ಗಂಟೆಯಾದರೂ ಮೀನಾಕ್ಷಿ ಹೆಗಡೆಯ ಸುಳಿವಿರಲಿಲ್ಲ. ಬಸ್ ಸ್ಟ್ಯಾಂಡ್ ಹೋಟೆಲಿನಲ್ಲಿ ಬಲವಂತವಾಗಿ ಒಂದಿಷ್ಟು ತಿಂದವನು ಮತ್ತೆ ಮೂರೂವರೆಯವರೆಗೂ ಕಾದು ಊರಿಗೆ ಹಿಂತಿರುಗಿದ್ದ. ಮಾರನೆಗೆ ಒಂದಿಷ್ಟು ರೋಷದಿಂದಲೇ ಕಾಲೇಜಿಗೆ ಹೋಗಿದ್ದ. ''ಮೀನಾಕ್ಷಿ ಹೆಗಡೆ ಕುಮಟೆಯ ಕ್ಯಾಶ್ಯೂ ಫ್ಯಾಕ್ಟರಿ ಯಜಮಾನನೊಂದಿಗೆ ಮುಂಬಯಿಗೆ ಪರಾರಿಯಾಗಿರುವಳಂತೆ...'' ''ಫ್ಯಾಕ್ಟರಿ ಓನರಿಗೆ ಹತ್ತಿರ ಹತ್ತಿರ ಮೂವತ್ತೆಂಟು ವರುಷಗಳಂತೆ...'' ''ಅವನಿಗೆ ಮುಂಬಯಿಯಲ್ಲಿ ಮಸ್ತ್ ಆಸ್ತಿ ಉಂಟಂತೆ. ಇನ್ನೊಂದು ಮದುವೆಯೂ ಆಗಿ ಮೊದಲ ಹೆಂಡತಿ ಮುಂಬಯಿಯಲ್ಲಿರುವಳಂತೆ...'' ''ಆಹಾ, ಎಂಥಾ ಸೈಲೆಂಟ್ ಕಿಲ್ಲರ್ ಮೀನಾಕ್ಷಿ ಹೆಗಡೆ. ಮುಂಬಯಿಯ ಅವಳ ಮನೆಯ ಉಪ್ಪರಿಗೆಯಲ್ಲಿ ಕುಳಿತರೆ ಸಮುದ್ರದೊಂದಿಗೆ ಅರ್ಧ ಮುಂಬಯಿ ಕಾಣುತ್ತದಂತೆ...'' ''ಮೀನಾಕ್ಷಿ ಬಂಪರ್ ಲಾಟರಿ ಹೊಡೆದಳು...'' ಮುಂತಾಗಿ ಕಾಲೇಜು, ಪಟ್ಟಣ, ಹಳ್ಳಿಗಳಲ್ಲಿ ಅಂದು ಮಾತನಾಡಿದ ಜನರ ಮಾತುಗಳು ಈಗ ಕೇಳಿದಂತೆ ಅನ್ನಿಸತೊಡಗಿತ್ತು. ಆ ಘಟನೆ ನಡೆದ ಮೂರು ವರ್ಷಗಳ ಮೇಲೆ ಅಲ್ಲಮಪ್ರಭುವಿಗೊಂದು ಇನ್‌ಲ್ಯಾಂಡ್ ಲೆಟರ್ ಬಂದಿತ್ತು. ಅಡ್ರೆಸ್ ಕೈ ಬರಹದಲ್ಲಿಲ್ಲದೆ ಟೈಪ್ ಮಾಡಲಾಗಿತ್ತು. ಲೆಟರ್ ಓಪನ್ ಮಾಡಿ ನೋಡಿದ. ಟೈಪ್ ಮಾಡಿದ ಒಂದೇ ಲೈನು 'ನನ್ನನ್ನು ಕ್ಷಮಿಸಿಬಿಡು...' ಎಂದು. ಕೆಳಗೆ ಮೀನಾಕ್ಷಿ ಹೆಗಡೆ ಎಂದು ಸಹಿ ಮಾಡಲಾಗಿತ್ತು.

ರೆಸಾರ್ಟಿನಲ್ಲಿಯೇ ಬಿಸಿಬಿಸಿ ನೀರಿನಲ್ಲಿ ಸ್ನಾನ ಮುಗಿಸಿ ಸರಿಯಾಗಿ ಎಂಟು ಗಂಟೆಗೆಲ್ಲ ಕೋಟಿತೀರ್ಥದ ರಸ್ತೆಯ ಮಹಾಬಲೇಶ್ವರ ಭಟ್ಟರ ಜಗುಲಿಯ ಮೇಲೆ ಕುಳಿತಿದ್ದ. ಭಟ್ಟರ ಮನೆಯಲ್ಲಿಯೇ ಬಿಸಿಬಿಸಿ ಉಪ್ಪಿಟ್ಟು ಬಡಿಸಿದ್ದರು. ಭಟ್ಟರ ಹೆಂಡತಿ ಮೀನಾಕ್ಷಿ ಹೆಗಡೆಯನ್ನೇ ಹೋಲುತ್ತಿದ್ದಾರಲ್ಲ ಅನ್ನಿಸಿತು ಕ್ಷಣ. ಬಹುಶಃ ಅಷ್ಟೇ ವಯಸ್ಸಿದ್ದಿರಬೇಕು. ಅವಳಂತೆಯೇ ಉದ್ದನೆಯ ಕೂದಲು. ''ನನ್ನ ಹೆಂಡತಿ, ರುಕ್ಮಿಣಿ ಅಂತ ಹೆಸರು. ಇಲ್ಲೆ ಹನೇಹಳ್ಳಿಯವಳು. ಜಿಎಸ್ಬಿ. ಇಂಟರ್‌ಕ್ಯಾಸ್ಟ್ ಮದುವೆ ನಮ್ಮದು. ಉಪ್ಪಿಟ್ಟು ಇವಳೇ ಮಾಡಿದ್ದು. ಇವಳ ಕೈ ರುಚಿ ಅದ್ಭುತ. ನಿಮಗೆ ಗೊತ್ತಲ್ಲ ಜಿಎಸ್ಬಿಗಳು ಕೆಜಿಗಟ್ಟಲೇ ಚಿಕನ್, ಫಿಶ್ ತಿಂತಾರೆ. ತಿಂಗಳಿಗೊಮ್ಮೆಯಾದರೂ ಇವಳೂ ತೌರಿಗೆ ಹೋಗಿ ಭರ್ತಿ ಫಿಶ್ ತಿಂದು ಬರ್ತಾಳೆ, ತೃಪ್ತಿಯಾಗಿ.'' ಎಂದು ಭಟ್ಟರು ತಮ್ಮ ಹೆಂಡತಿಯ ಬಗ್ಗೆ ಹೆಮ್ಮೆಯಿಂದ ಮಾತನಾಡುತ್ತಾ ನಿಂತೇ ಉಪ್ಪಿಟ್ಟು ತಿಂದು ಮುಗಿಸಿದ್ದರು. ಭಟ್ಟರ ಜೊತೆಯಲ್ಲಿ ಕೋಟಿತೀರ್ಥದ ಕಡೆ ನಡೆದಿದ್ದ ಅಲ್ಲಮಪ್ರಭು. ಕೋಟಿತೀರ್ಥದ ಮಂಟಪಗಳಲ್ಲಿ ಏಳೆಂಟು ಕಡೆ ಪೂಜೆಗಳು ನಡೆಯುತ್ತಿದ್ದವು. ಭಟ್ಟರ ಅಸಿಸ್ಟೆಂಟ್ ಪೂಜೆಗೆ ರೆಡಿ ಮಾಡಿದ್ದನಲ್ಲದೆ, ಮಂತ್ರ ಪಠಿಸಲು ಐದು ಜನ ಹಿರಿಯ ಪುರೋಹಿತರು ಬಂದು ಕುಳಿತಿದ್ದರು. ಕೋಟಿತೀರ್ಥದಲ್ಲಿ ಸ್ನಾನ ಮಾಡಲು ಹೇಳಿದಾಗ ಅಲ್ಲಮಪ್ರಭುವಿಗೆ